## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಆಪ್ತ ಕಾರ್ಯದರ್ಶಿ (ಆಯ್ಕೆ ಶ್ರೇಣಿ) ವೃಂದದ ಅಧಿಕಾರಿಗಳಿಗೆ ಗೃಹ ಪರಿಚಾರಕ ಭತ್ಯೆಯನ್ನು ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ: 1.ಸರ್ಕಾರದ ಆದೇಶ ಸಂ:ಸಿಆಸುಇ 232 ಸಿಸೇನಿ 2011, ದಿನಾಂಕ: 28.01.2012.
2.ಸರ್ಕಾರದ ಆದೇಶ ಸಂ:ಸಿಆಸುಇ 326 ಸಿಸೇನಿ 2016, ದಿನಾಂಕ: 20.07.2017.
3.ಕರ್ನಾಟಕ ಸರ್ಕಾರದ ಸಚಿವಾಲಯದ ಆಪ್ತ ಕಾರ್ಯದರ್ಶಿಗಳ ಸಂಘದ ಅಧ್ಯಕ್ಷರ ದಿನಾಂಕ:12.07.2017ರ ಪತ್ರ.

**ಪ್ರಸ್ತಾವನೆ:**

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಸರ್ಕಾರದ ಅಪರ ಕಾರ್ಯದರ್ಶಿಗಳಿಗೆ ತಿಂಗಳಿಗೆ ರೂ 3000/- ಗೃಹಪರಿಚಾರಕ ಭತ್ಯೆಯನ್ನು ಮಂಜೂರು ಮಾಡಲಾಗಿದೆ. ಮೇಲೆ (2)ರಲ್ಲಿ ಓದಲಾದ ಆದೇಶದಲ್ಲಿ ಸರ್ಕಾರದ ಅಪರ ಕಾರ್ಯದರ್ಶಿಗಳಿಗೆ ಮಂಜೂರಾಗುವ ಗೃಹ ಪರಿಚಾರಕ ಭತ್ಯೆಯನ್ನು ತಿಂಗಳಿಗೆ ರೂ 5250/-ಕ್ಕೆ ಹೆಚ್ಚಿಸಿ ಪರಿಷ್ಕರಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 230 ಸಉಸೇ 2014 ದಿನಾಂಕ:04.06.2015ರಲ್ಲಿ 03 ಆಪ್ತಕಾರ್ಯದರ್ಶಿ(ಆಯ್ಕೆ ಶ್ರೇಣಿ) ವೃಂದದ ಹುದ್ದೆಗಳು ಸೃಜನೆಯಾಗಿದ್ದು ಅವುಗಳನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ 244 ಸಉಸೇ 2015 ದಿನಾಂಕ:13.08.2015ರನ್ವಯ ಸ್ಥಾನಪನ್ನ ಮುಂಬಡ್ತಿ ಮೂಲಕ ತುಂಬಲಾಗಿದೆ. ಮೇಲೆ (3)ರಲ್ಲಿ ಓದಲಾದ ಪತ್ರದಲ್ಲಿ ಅಧ್ಯಕ್ಷರು, ಕರ್ನಾಟಕ ಸರ್ಕಾರದ ಸಚಿವಾಲಯದ ಆಪ್ತ ಕಾರ್ಯದರ್ಶಿಗಳ ಸಂಘ ಇವರು ಆಪ್ತ ಕಾರ್ಯದರ್ಶಿ(ಆಯ್ಕೆ ಶ್ರೇಣಿ) ಹುದ್ದೆಯು ಸರ್ಕಾರದ ಅಪರ ಕಾರ್ಯದರ್ಶಿ ಹುದ್ದೆಗೆ ತತ್ಸಮಾನವಾಗಿದ್ದು, ಸರ್ಕಾರದ ಅಪರ ಕಾರ್ಯದರ್ಶಿ ಹುದ್ದೆಗಳಿಗೆ ಗೃಹ ಪರಿಚಾರಕ ಭತ್ಯೆ ಮಂಜೂರಾಗಿರುವಂತೆ ಆಪ್ತ ಕಾರ್ಯದರ್ಶಿ (ಆಯ್ಕೆ ಶ್ರೇಣಿ) ಹುದ್ದೆಗಳಿಗೂ ಗೃಹ ಪರಿಚಾರಕ ಭತ್ಯೆಯನ್ನು ಮಂಜೂರು ಮಾಡುವಂತೆ ಕೋರಿದ್ದಾರೆ. ಅದರಂತೆ, ಅವರ ಕೋರಿಕೆಯನ್ನು ಪರಿಶೀಲಿಸಿ, ಸರ್ಕಾರದ ಅಪರ ಕಾರ್ಯದರ್ಶಿಗಳಿಗೆ ಕಾಲಕಾಲಕ್ಕೆ ಮಂಜೂರಾಗಿರುವ ಗೃಹ ಪರಿಚಾರಕ ಭತ್ಯೆಯನ್ನು ಈ ಹುದ್ದೆಗೆ ಸಮಾನಾಂತರವಾದ ಆಪ್ತ ಕಾರ್ಯದರ್ಶಿ (ಆಯ್ಕೆ ಶ್ರೇಣಿ) ವೃಂದದ ಅಧಿಕಾರಿಗಳಿಗೂ ವಿಸ್ತರಿಸಲು ಸರ್ಕಾರವು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

### ಸರ್ಕಾರದ ಆದೇಶ ಸಂ:ಸಿಆಸುಇ 160 ಸಿಸೇನಿ 2017, ಬೆಂಗಳೂರು ದಿನಾಂಕ:21.09.2017.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂ:ಸಿಆಸುಇ 232 ಸಿಸೇನಿ 2011, ದಿನಾಂಕ: 28.01.2012ರಲ್ಲಿ ಸರ್ಕಾರದ ಅಪರ ಕಾರ್ಯದರ್ಶಿಗಳಿಗೆ ಮಂಜೂರಾಗಿರುವ ಮಾಸಿಕ ರೂ3,000/- (ರೂಪಾಯಿ ಮೂರು ಸಾವಿರಗಳು ಮಾತ್ರ)ಗಳ ಹಾಗೂ ಸರ್ಕಾರದ ಆದೇಶ ಸಂ:ಸಿಆಸುಇ 326 ಸಿಸೇನಿ 2016, ದಿನಾಂಕ: 20.07.2017ರಲ್ಲಿ ಸರ್ಕಾರದ ಅಪರ ಕಾರ್ಯದರ್ಶಿಗಳಿಗೆ ಮಂಜೂರಾಗಿರುವ ಮಾಸಿಕ ರೂ5,250/- (ರೂಪಾಯಿ ಐದು ಸಾವಿರದ ಇನ್ನೂರ ಐವತ್ತು ಮಾತ್ರ)ಗಳ ಗೃಹ ಪರಿಚಾರಕ ಭತ್ಯೆಯನ್ನು ಈ ಹುದ್ದೆಗಳಿಗೆ ತತ್ಸಮಾನವಾದ ಆಪ್ತ ಕಾರ್ಯದರ್ಶಿ (ಆಯ್ಕೆ ಶ್ರೇಣಿ) ವೃಂದದ ಅಧಿಕಾರಿಗಳಿಗೂ ಸಹ ವಿಸ್ತರಿಸಲಾಗಿದೆ.

ಅಧಿಕಾರಿಗಳ ನಿವಾಸಕ್ಕೆ ಕಚೇರಿಯಿಂದ ಗೃಹ ಪರಿಚಾರಕರನ್ನು ಒದಗಿಸದಿದ್ದಲ್ಲಿ ಮಾತ್ರ ಈ ಭತ್ಯೆಯನ್ನು ನೀಡಲಾಗುವುದು. ಈ ಭತ್ಯೆಯನ್ನು ಮಂಜೂರು ಮಾಡಲು ಈ ಹಿಂದೆ ವಿಧಿಸಿರುವ ಇತರೆ ನಿರ್ಬಂಧಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ:ಆಇ 469 ಸೇ-2/2017 ದಿನಾಂಕ: 08.09.2017ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

21/9

**(ಹೆಚ್.ಪಿ.ಲೀಲಾ)**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಆಡಳಿತ-3) ☎: 22032274

**ಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಮುಂದಿನ ಸಂಚಿಕೆಯಲ್ಲಿ ಪ್ರಕಟಗೊಳಿಸಲು ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ-ಇ) ಶಾಖೆಗೆ 100 ಪ್ರತಿಗಳನ್ನು ಕಳುಹಿಸಲು ಕೋರಿದೆ.

**ಇವರಿಗೆ:**

1) ಮಹಾಲೇಖಪಾಲರು, ಲೆಕ್ಕಗಳು/ಲೆಕ್ಕಪರಿಶೋಧನೆ, ಕರ್ನಾಟಕ, ಬೆಂಗಳೂರು.
2) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
3) ಎಲ್ಲಾ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳಿಗೆ
4) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳಿಗೆ
5) ಸರ್ಕಾರದ ಕಾಯದರ್ಶಿ/ವಿಶೇಷ ಕಾರ್ಯದರ್ಶಿ, ಸಿ.ಆ.ಸು.ಇ., ಇವರ ಆಪ್ತಕಾರ್ಯದರ್ಶಿಗಳು
6) ಸರ್ಕಾರದ ಅಪರ ಕಾರ್ಯದರ್ಶಿ, ಸಿ.ಆ.ಸು.ಇ.(ಆಡಳಿತ), ಇವರ ಆಪ್ತ ಸಹಾಯಕರು
7) ಎಲ್ಲಾ ಆಪ್ತ ಕಾರ್ಯದರ್ಶಿಗಳು (ಆಯ್ಕೆ ಶ್ರೇಣಿ)
8) ಅಧ್ಯಕ್ಷರು, ಕರ್ನಾಟಕ ಸರ್ಕಾರದ ಸಚಿವಾಲಯದ ಆಪ್ತ ಕಾರ್ಯದರ್ಶಿಗಳ ಸಂಘ, ಬೆಂಗಳೂರು.
9) ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸುಇ (ಲೆಕ್ಕಪತ್ರ-1)/ (ಲೆಕ್ಕಪತ್ರ-2)/(ಲೆಕ್ಕಪತ್ರ-3).
10) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಸೇವೆಗಳು-2)
11) ಶಾಖಾ ಆದೇಶಗಳ ಕಡತ /ಹೆಚ್ಚುವರಿ ಪ್ರತಿಗಳು.